‘ನಾನು ಸತ್ತು ನಿನ್ನ ಅಕ್ಕ ಬದುಕಿದ್ದಿದ್ರೆ ಇದೇ ಮಾತು ಹೇಳ್ತಿದ್ದ್ಯಾ? ಗಂಡು ಹುಡುಕೋಕೆ ಹೊರಡ್ತಿದ್ದ್ಯಾ?’

‘...’

‘ಆಯ್ತು ಬಿಡು, ಇನ್ನು ಈ ಪ್ರಸ್ತಾಪ ಬೇಡ’

‘ಬೇಕಾರೆ ಇನ್ನೊಂದಿಷ್ಟು ಟೈಂ ತಗೊಳ್ಳಿ...’

‘ಈ ವಿಷಯ ಇಲ್ಲಿಗೆ ಮುಗೀತು ಅಂದ್ನಲ್ಲ.’

ಚಿದಾನಂದ ತಿಂಡಿ ಮುಗಿಸಿ ಕೈ ತೊಳೆಯಲು ಎದ್ದು ಹೋದ. ಇತ್ತ ಭಾಮ ದಳಗುಟ್ಟಿ ಕಣ್ಣಿಂದ ಇಳಿಯುತ್ತಿದ್ದ ಕಣ್ಣೀರನ್ನು, ಅಲ್ಲಲ್ಲ, ಆನಂದಬಾಷ್ಪವನ್ನು ನಿಗ್ರಹಿಸಿಕೊಳ್ಳುವ ಪ್ರಯತ್ನ ಮಾಡುತ್ತಾ ಭಾವೋದ್ವೇಗಕ್ಕೆ ಒಳಗಾಗಿದ್ದಳು. ತನ್ನಪ್ಪನ ಬಗ್ಗೆ ಅವಳ ಪ್ರೀತಿ ಇಮ್ಮಡಿ, ಮುಮ್ಮಡಿಯಾಗಿ ಅಪ್ಪನನ್ನು ತಬ್ಬಿ ಮನಸೋಇಚ್ಛೆ ಅಳಬೇಕೆನ್ನುವ ಅನಿಸಿಕೆಗೆ ಕಷ್ಟಪಟ್ಟು ತಡೆ ಹಾಕಿಕೊಂಡಳು ಹುಡುಗಿ. ಅಮ್ಮ ಸತ್ತ ಮೇಲೆ ಸದಾ ಕಲ್ಲುಗುಂಡು ಹೇರಿದಂತೆ ಭಾರವಾಗಿರುತ್ತಿದ್ದ ಹೃದಯ ಅವತ್ತು, ಆ ಗಳಿಗೆಯಲ್ಲಿ ಗರಿಹಗುರವಾಗಿ ಗಾಳಿಯಲ್ಲಿ ತೇಲುತ್ತಿರುವ ಅನುಭವ. ತಿಂಡಿ ತಿಂದು ಒಳಗೆ ಬಂದ ತಮ್ಮನನ್ನು ಅಪ್ಪಿಕೊಂಡು ಅವನ ನೆತ್ತಿಗೆ ಲೊಚಲೊಚನೆ ಮುತ್ತಿಟ್ಟಳು ಭಾಮ.

‘ಕತ್ತೆ ಬಡವಾ, ನಿನ್ನ ನಾಲಿಗೇಲಿ ಮಚ್ಚೆ ಇರೋದು ಹೌದು ಕಣೋ...’ ಎಂದು ಪಿಸುಗುಟ್ಟಿದಳು.

‘ನಂಗ್ಯಾಕೇ ಬೈತಿದ್ದಿ?’ ಎನ್ನುತ್ತಾ ಕೊಸರಿಕೊಂಡ ಭಾರ್ಗವ.

ಕಾಫಿ, ತಿಂಡಿ ಮುಗಿಸಿದ ಸೋದರಮಾವ ಮತ್ತೊಂದು ಕ್ಷಣ ಆ ಮನೆಯಲ್ಲಿ ನಿಲ್ಲಲಿಲ್ಲ.

‘ಬರ್ತೀನಿ ಕಣ್ರೋ...’ ಎಂದು ಮಕ್ಕಳಿಗೆ ಹೇಳಿ ಹೋಗಲಿಲ್ಲ. ‘ಹೊರಟೆ ನಾನು’ ಎಂದಷ್ಟೇ ಎಲ್ಲರಿಗೂ ಅನ್ವಯಿಸುವಂತೆ ಹೇಳಿ ಜಾಗ ಖಾಲಿ ಮಾಡಿದ.

‘ಇನ್ಮೇಲೆ ಸೋದರಮಾವನನ್ನೂ ಕಳ್ಕೊಂಡ್ರಿ ಅನಿಸುತ್ತೆ...’ ಮುಂಬಾಗಿಲು ಮುಚ್ಚಿ ಬಂದ ಚಿದಾನಂದ ಮಗಳನ್ನುದ್ದೇಶಿಸಿ ಹೇಳಿದ.

‘ಸೋದರಮಾವ ಇಲ್ದಿದ್ರೆ ಏನಾಗಲ್ಲ ಅಪ್ಪಾ. ನೀನಿದ್ರೆ ಸಾಕು’ ನಿರಾಳವಾಗಿ ಹೇಳಿದಳು ಭಾಮ. ಹೀಗಿದ್ದೇನೋ ಒಳ ಉದ್ದೇಶ ಇಟ್ಟುಕೊಂಡು ಬರುವುದಾದರೆ ಅವನು ಬರುವುದೇ ಬೇಡ ಎನಿಸುತ್ತಿತ್ತು ಅವಳಿಗೆ.

ಚಿದಾನಂದನ ಊಹೆ ಸುಳ್ಳಾಗಲಿಲ್ಲ. ಬೇಸಿಗೆ ರಜಾ ಶುರುವಾಗುತ್ತಿದ್ದಂತೆ ತಪ್ಪದೆ ಬಂದು ಹಳ್ಳಿಗೆ ಕರೆದುಕೊಂಡು ಹೋಗುತ್ತಿದ್ದ ಮಾವ ಆ ಸಲ ಮುಖ ತೋರಿಸಲಿಲ್ಲ. ಈ ಕುರಿತು ಭಾಮ ಪಿಟ್ಟೆಂದು ಉಸಿರೊಡೆಯದಿದ್ದರೂ ಭಾರ್ಗವ ಕೇಳಿಯೇ ಕೇಳಿದ,

‘ಮಾವ ಬರ್ಲಿಲ್ವಲ್ಲೇ, ಈ ಸಲ ನಾವ್ ನಾವೇ ಊರಿಗೆ ಹೋಗೋಣ್ವಾ?’

‘ಅಪ್ಪ ಒಬ್ರನ್ನೇ ಬಿಟ್ಟು ಹೋಗೋದಾ? ಊಟ, ತಿಂಡಿಗೆ ಕಷ್ಟ ಆಗಲ್ವಾ?’ ದೊಡ್ಡ ಮನುಷ್ಯಿಯಂತೆ ಕೇಳಿದಳು ಭಾಮ.

‘ಹೌದಲ್ವಾ? ಹೋಗ್ಲಿ ಬಿಡು...’ ಅವಳು ನಿರೀಕ್ಷಿಸಿದ ಉತ್ತರ ಅವನ ಬಾಯಿಂದ ಬಂತು. ಕಷ್ಟ ಆಗುತ್ತಿತ್ತೋ, ಬಿಡುತ್ತಿತ್ತೋ, ಬಾವನೆಂಟ

